ನಕ್ಷತ್ರಪಟ




**ಜಿ.ವಿ. ಅರುಣ**

ಕಲೆ: ಸಂತೋಷ್ ಸಸಿಹಿತ್ಲು


# ಪುಟ್ಟಿಯು ಕಟ್ಟಿದ ದೇವರಕಾಡು

ಪುಟ್ಟಿಗೆ ತನ್ನ ಕಾಡಿನ ಗೆಳೆಯರನ್ನು ಕಂಡರೆ ಅಪಾರ ಪ್ರೀತಿ. ತಾತ ಹೇಳುವ ಕಾಡಿನ ಕಥೆಗಳನ್ನು ಕೇಳುವುದೂ ಅವಳಿಗೆ ಇಷ್ಟ. ‘ಕಾಡಿದ್ದರೆ ನಮ್ಮ ಊರು ಇರುತ್ತದೆ’ ಎಂಬುದರಲ್ಲಿ ಅವಳಿಗೆ ಅನುಮಾನವೇ ಇರಲಿಲ್ಲ. ಹಾಗಾಗಿ ಅವಳ ಕಾಡಿನ ಗೆಳೆಯರು ವಾಸ ಮಾಡುವ ಕಾಡಿನ ಮೇಲೂ ಬಹಳ ಪ್ರೀತಿ ಇತ್ತು.

ಅಂದು ಎಂದಿನಂತೆ ಆಟವಾಡಲು ಕಾಡಿನ ಅಂಚಿಗೆ ಪುಟ್ಟಿ ಹೋದಳು. ಅಷ್ಟು ಹೊತ್ತಿಗೆ ಆನೆಮರಿ ಅಂಬಾರಿ, ಮೊಲದಮರಿ ಚಂದ್ರಕಲಾ, ಕೋತಿಮರಿ ಅಂಗದ, ಗಿಣಿಮರಿ ಕೆಂಪುಕೊಕ್ಕು ಹಸಿರುಪಕ್ಕೆ ಬಂದು ಅವಳಿಗೆ ಕಾಯುತ್ತಿದ್ದರು.

‘ಇವತ್ತು ನೀವೆಲ್ಲಾ ನನಗಿಂತ ಮೊದಲೇ ಬಂದು ಬಿಟ್ಟಿದ್ದೀರಾ, ಏನು ಸಮಾಚಾರ?’ ಎಂದು ಕೀಟಲೆ ಮಾಡುತ್ತಾ ಪುಟ್ಟಿ ಕೇಳಿದಳು. ಅವುಗಳ ಮುಖದ ಮೇಲಿದ್ದ ಗಾಬರಿ ಪುಟ್ಟಿಗೆ ಗೊತ್ತಾಗಲಿಲ್ಲ.

ಅವೆಲ್ಲ ಒಂದರ ಮುಖವನ್ನು ಇನ್ನೊಂದು ನೋಡಿ ಕೊಂಡವು. ಸ್ವಲ್ಪ ಗೊಂದಲದಲ್ಲಿದ್ದಂತೆ ಕಾಣುತ್ತಿದ್ದ ಅಂಬಾರಿ, ‘ಹೂಂ ಅಕ್ಕಾ, ಸಮಾಚಾರ ಇದೆ...’ ಎಂದು ಹೇಳಲು ಪ್ರಾರಂಭಿಸಿತು.

ಹಿಂದಿನ ದಿನ ಯಾರೋ ಮೂರುನಾಲ್ಕು ಜನರು ಬಂದು ಕಾಡಿನಲ್ಲಿದ್ದ ಒಂದು ದೊಡ್ಡ ಮರವನ್ನು ಕಡಿದು ಹಾಕಿದ್ದರು. ಕಡಿಯಲು ತಂದಿದ್ದ ಉಪಕರಣಗಳನ್ನು ಅಲ್ಲೇ ಬಿಟ್ಟು, ‘ಇನ್ನೂ ಎರಡು ಮೂರು ದಿನಗಳಲ್ಲಿ ಮತ್ತಷ್ಟು ಜನರನ್ನು ಕರೆದುಕೊಂಡು ಬಂದು, ನೂರು ಮರಗಳನ್ನು ಕಡಿದು ಹಾಕೋಣ’ ಎಂದು ಮಾತಾಡಿಕೊಂಡರು ಎಂದು ತಿಳಿಸಿತು.

ಆನೆಮರಿ ಅಂಬಾರಿಯ ಅಪ್ಪ ದೊಡ್ಡಾನೆ, ಹೀಗೆ ಮರ

